ಅಂತಹುವೆ. ಇವೆಲ್ಲವೂ ಸಹ ಮೊರಸುನಾಡುವಿನ ಜನ-ಜೀವನ-ಸಂಸ್ಕೃತಿಯ ಧ್ವನಿಗಳಾಗಿದ್ದವು. ವಿಶೇಷವಾಗಿ ರಾಮಾಯಣವನ್ನು ಕುರಿತ ಜಾನಪದ ಗೀತೆಗಳು ನಮ್ಮ ಮೊರಸುನಾಡಿನಲ್ಲಿ ಹೊಸಹೊಸ ನೋಟಗಳನ್ನು ಕೊಡುತ್ತವೆ. ಒಂದು ಕಥನಕವಿತೆಯೊಳಗೆ ನಮ್ಮ ಜಾನಪದರು ಮಹಾಕವಿಗಳಿಗೂ ಕಾಣದಂತಹ ದರ್ಶನವವನ್ನ ಕಟ್ಟಿಕೊಟ್ಟಿದ್ದಾರೆ. ಜಟಾಯು ರಾವಣನಿಂದ ರೆಕ್ಕೆ ಕಡಿಸಿಕೊಂಡು ಬಿದ್ದಿದ್ದಾಗ ರಾಮ ಜಟಾಯುವನ್ನ 'ಗರಿಕಾಲನೆ' ಅಂತ ಸಂಬೋಧಿಸುತ್ತಾನೆ. ತೆಲುಗಲ್ಲಿ 'ಗರಿಕಾಲುಡ' ಅಂತ. ಹದ್ದಿಗೆ ಕಾಲಿನ ಉಗುರಿನ ಮೇಲೆ ಎರಡು ಚಿಕ್ಕಚಿಕ್ಕ ಗರಿಗಳು ಇರ್ತಾವೆ. ಅಂದರೆ ನಮ್ಮ ಜಾನಪದರು ತಮ್ಮ ಸುತ್ತಮುತ್ತಲ ಪರಿಸರದ ಅತಿ ಸೂಕ್ಷ್ಮ ವಿವರಗಳನ್ನು ಎಷ್ಟು ಅದ್ಭುತವಾಗಿ ಗಮನಿಸಿರುತ್ತಾರೆ ಅಂತ. ಜಟಾಯು ರಾಮನಿಗೆ ನನ್ನನ್ನು ಸಮಾಧಿಯಿಲ್ಲದ ಜಾಗದಲ್ಲಿ ಸುಡು ಅಂತ ಕೇಳುವುದು, ರಾಮ ಅಂತಹ ಜಾಗ ಭೂಮಿಯ ಮೇಲೆ ಇಲ್ಲ ಅನ್ನುವುದು, ಜಟಾಯು ನಿನ್ನ ಅಂಗೈ ಇದೆಯಲ್ಲ ಅಲ್ಲೇ ಸುಡು ಅನ್ನುವುದು - ಇವೆಲ್ಲವೂ ನಮ್ಮ ಜಾನಪದರ ಸೂಕ್ಷ್ಮತೆಗಳನ್ನ, ದರ್ಶನವನ್ನ ತಿಳಿಸುವಂತಹವು. ಮತ್ತೆ ನಮ್ಮ ಜಾನಪದರು ರಾಮ ಮತ್ತು ಲವ-ಕುಶರ ನಡುವೆ ಯುದ್ಧ ಮಾಡಿಸೋಲ್ಲ ಗುರುವೆ. ರಾಮ ತನ್ನ ಮನೋನೇತ್ರದಿಂದ ಅವರನ್ನು ತನ್ನ ಮಕ್ಕಳೆಂದು ತಿಳಿದು ಅವರ ಬಳಿ ಹೋಗ್ತಾನೆ. ಇದು ನಮ್ಮ ಜಾನಪದರಿಗಿರುವ ಯುದ್ಧ ವಿರೋಧಿ ಪ್ರಜ್ಞೆ.

ನಮ್ಮ ಕೋಲಾರ-ಚಿಕ್ಕಬಳ್ಳಾಪುರ ಜಿಲ್ಲೆಯೊಳಗೆ ಹಲವು ಜಾನಪದ ರಾಮಾಯಣ, ಮಹಾಭಾರತಗಳು ಮತ್ತು ಅದಕ್ಕೆ ಸಂಬಂಧಿಸಿದಂತಹ ಐತಿಹ್ಯಗಳು ಬಹಳಷ್ಟು ಸಿಗುತ್ತವೆ. ಆಮೇಲೆ ಒಂದು ತಮಾಷೆ ಅಂದ್ರೆ, ನಮ್ಮ ಜಾನಪದರು ರಾಮಾಯಣ ಮತ್ತು ಮಹಾಭಾರತಗಳನ್ನು ಒಂದು ವಾಕ್ಯದಲ್ಲಿ ವಿಮರ್ಶಿಸಿದ್ದಾರೆ. 'ರಾಮಾಯಣಂ ರಂಕು ಮೋಜು, ಭಾರತಂ ಬೊಂಕು ಮೋಜು' ಅಂತ. ಇಡೀ ಎರಡು ಮಹಾಕಾವ್ಯಗಳನ್ನು ಒಂದು ಸಾಲಿನಲ್ಲಿ ವಿಮರ್ಶಿಸುವ ಪ್ರಜ್ಞೆಯುಳ್ಳವರು ನಮ್ಮ ಜಾನಪದರು. ಮತ್ತು ಅವರಿಗೆ ರಾಮಾಯಣ ಮತ್ತು ಮಹಾಭಾರತಗಳು ಇವತ್ತಿಗೂ ಸಮಕಾಲೀನವೆ.

◆ **ಮೊರಸುಗನ್ನಡದ ಬಗ್ಗೆ ಹೊಸತಲೆಮಾರಿನ ಆಸಕ್ತಿ ಹೇಗಿದೆ? ಬರವಣಿಗೆ ಮತ್ತು ಓದು ಎರಡನ್ನೂ ಪರಿಗಣಿಸಿ ಹೇಳಿ?**

ಮೊರಸುನಾಡಿನ ಕನ್ನಡದ ಬಗ್ಗೆ ಹೊಸ ತಲೆಮಾರಿಗೆ ಆಸಕ್ತಿ ಹುಟ್ಟಿಸಬೇಕಿದೆ. ಯಾಕೆ ಅಂದ್ರೆ ಇಂಥ ಒಂದು ಭಾಷೆ ಇದೆ, ಇದರ ಲಕ್ಷಣ ಇದು, ಇದು ಸಾಹಿತ್ಯದ ಭಾಷೆ ಆಗಬಹುದು, ನಾವು ಇದಕ್ಕೆ ಒಂದು ಅರ್ಥವನ್ನು ಕೊಟ್ಟು ಹೊರಗಿನವರಿಗೆ ಅರ್ಥೈಸಬಹುದು ಅನ್ನೋದನ್ನ ನಾವಿನ್ನೂ ಬೆಳೆಸಿಲ್ಲ. ನನಗನಿಸೋ ಮಟ್ಟಿಗೆ ಶಾಲಾ ಮಕ್ಕಳಿಗೆ ಕಮ್ಮಟಗಳ ಮೂಲಕ ಅವರಲ್ಲಿ ಒಬ್ಬ ಬರಹಗಾರನನ್ನ ಗುರುತಿಸಿಕೊಟ್ಟು ಅವರಿಗೆ ಈ ಭಾಷೆಯ ಬಗ್ಗೆ ತಿಳಿಸಿ, ಅವರು ಅದನ್ನು ಬಳಸುವ ರೀತಿಯಲ್ಲಿ ಮಾಡುವ ಕ್ರಮ ಇದೆಯಲ್ಲ ಅದು ಬಹಳ ಮುಖ್ಯವಾದದ್ದು. ಈಗ ನಾನು ಕೆಲವು ಶಾಲಾ ಮಕ್ಕಳನ್ನು ಇಟ್ಟುಕೊಂಡು ಬಲ್ಲ ನನ್ನ ತಿಳಿಗನ್ನಡದ ಮೂಲಕ ಮೊರಸುನಾಡು ಕನ್ನಡಕ್ಕೆ ಕರೆದುಕೊಂಡು ಹೋಗುವಂತಹ ಪ್ರಯತ್ನದಲ್ಲಿರುವೆ. ಮೊದಲು ಪದಗಳನ್ನು ಪರಿಚಯಿಸಿ, ಆಮೇಲೆ ಅಲ್ಲಲ್ಲಿ ಅವುಗಳನ್ನು ಬಳಸುವಂತೆ ಮಾಡಿ, ನಂತರ ಪೂರ್ಣ ಪ್ರಮಾಣದ ಮೊರಸುನಾಡು ಕನ್ನಡದಲ್ಲಿ ಕಥೆ-ಕಾವ್ಯ ಕಟ್ಟುವುದನ್ನು ತೋರಿಸಿಕೊಡಬೇಕು. ಕಲಿಸುವುದಲ್ಲ; ತೋರಿಸಿಕೊಡಬೇಕಾಗಿದೆ. ಹಾಗೆ ಮಾಡಿದ ದಿನ ಮೊರಸುಗನ್ನಡಕ್ಕೆ ಸಾಹಿತ್ಯಕ ಕನ್ನಡವಾಗುವ ಸಾಧ್ಯತೆ ಇರುತ್ತದೆ. ನಾವಿಲ್ಲಿ ಸೋತರೆ ಮೊರಸುನಾಡು ಕನ್ನಡಕ್ಕೆ ಹೊರಗಿನವರ್‍ಯಾರೂ ಸಮಾಧಿ ಕಟ್ಟುವುದಿಲ್ಲ, ನಾವೇ ಕಟ್ಟುತ್ತೇವೆ.

◆ **ಈಚೆಗೆ ನಿಮಗೆ ಕರ್ನಾಟಕ ಸರ್ಕಾರ 'ಪ್ರೊ. ಕೆ.ಜಿ. ಕುಂದಾಣಗಾರ ಗಡಿನಾಡ ಸಾಹಿತ್ಯ ಪ್ರಶಸ್ತಿ' ನೀಡಿ ಗೌರವಿಸಿದೆ. ಅದಕ್ಕಾಗಿ ಅಭಿನಂದನೆಗಳು.**

ಒಂದು ಪ್ರಶಸ್ತಿ ಸ. ರಘುನಾಥನಿಗೆ ಕೊಟ್ಟಿದ್ದಲ್ಲ. ಮೊರಸುನಾಡಿಗೆ ಕೊಟ್ಟದ್ದು. ಒಂದು ಅಂಕಿತ ಬೇಕಿತ್ತು; ಸರ್ಕಾರಕ್ಕೆ ಸಿಕ್ಕಿದ್ದು ಸ. ರಘುನಾಥ. ಆದರೆ ಅದನ್ನ ಮೊರಸುನಾಡಿನ ನೆಲಕ್ಕೆ, ಜಾನಪದರಿಗೆ, ರೈತ ಸಮುದಾಯಕ್ಕೆ ಅರ್ಪಿಸುತ್ತೇನೆ. ನನಗೆ ಎಂಬ ಹೆಮ್ಮೆಯಿಲ್ಲ, ನಾಡಿನದ್ದು ಅನ್ನುವ ಅಹಂಕಾರ ನನಗಿದೆ. ●